‘‘ಮೂರುವರೆ ಕೆ.ಜಿ. ತೂಗುವ ಮಗು ಮುಂದಿನ ಐದು ದಿನಗಳಲ್ಲಿ ಐದು ಟನ್ ತೂಗುವಷ್ಟು!’’

ಮೇಬಲ್ ಸರಕ್ಕನೆ ಮತ್ತೊಮ್ಮೆ ಹೆಣಿಗೆ ಕಡ್ಡಿಗಳನ್ನು ಪಕ್ಕಕ್ಕೆ ಸರಿಸಿದಳು.

‘‘ನೀನಿದನ್ನು ಇಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳುವ ಅಗತ್ಯವಿಲ್ಲ ಮೇಬಲ್!’’ ಅವಳ ಭಾವನೆಗಳನ್ನು ಗ್ರಹಿಸಿಕೊಂಡ ಆಲ್ಬರ್ಟ್ ಹೇಳಿದ.

‘‘ನಿನ್ನ ಮಾತನ್ನು ಮತ್ತೆ ಹೇಗೆ ತೆಗೆದುಕೊಳ್ಳಬೇಕು ಆಲ್ಬರ್ಟ್?’’ ಅವಳು ತೀಕ್ಷ್ಣವಾಗಿ ಕೇಳಿದಳು.

‘‘ವೈಜ್ಞಾನಿಕ ವಿಚಾರಗಳನ್ನು ಸರಳವಾಗಿ ಹೇಳಬೇಕಾದರೆ ಹೀಗೆ ಸ್ವಲ್ಪ ನಾಟಕೀಯವಾಗಿ ಹೇಳಬೇಕಾಗುತ್ತೆ ಮೇಬಲ್...’’

‘‘ಹಾಗಾದ್ರೆ, ನೀನು ಮುಂದುವರೆಸು ಆಲ್ಬರ್ಟ್.’’

‘‘ರಾಜಪಾಕ ಏನೆಂದು ನಿನಗೆ ಇನ್ನೂ ಗೊತ್ತಾಗುತ್ತಿಲ್ಲ ಮೇಬಲ್. ಇದನ್ನು ಸೇವಿಸಿದ ಒಂದು ಹಿಜಡಾ ಜೇನ್ನೊಣ ಕೂಡ ಹೇಗೆ ಫಲವಂತ ರಾಣಿ ಜೇನು ಆಗುತ್ತದೆ ಎಂಬುದನ್ನು ನಾನು ನಿನಗೆ ಇನ್ನೂ ವಿವರಿಸಿಲ್ಲ.’’

‘‘ನಮ್ಮ ಮಗು ಒಂದು ಹಿಜಡಾ ಕುರೂಪಿ ಎಂದು ನೀನು ಹೇಳುತ್ತಿಲ್ಲ ತಾನೆ?’’

‘‘ಮೇಬಲ್... ಮೇಬಲ್!! ನೀನು ನಾನು ಹೇಳಿರದ ಮಾತುಗಳನ್ನು ನನ್ನ ಬಾಯಲ್ಲಿ ತುರುಕಲು ಪ್ರಯತ್ನ ಮಾಡಬೇಡ... ಇಲ್ಲಿ ಕೇಳು... ಕೆಲಸಗಾರ ಜೇನ್ನೊಣಗಳು ಮತ್ತು ರಾಣಿ ಜೇನು ದೊಡ್ಡದಾದ ನಂತರ ಸ್ವರೂಪದಲ್ಲಿ ಬೇರೆ ಬೇರೆಯಾಗೇ ಕಾಣಿಸುತ್ತವೆಯಾದರೂ ಮೊಟ್ಟೆಗಳಲ್ಲಿ ಮಾತ್ರ ಯಾವುದೇ ವ್ಯತ್ಯಾಸಗಳಿರುವುದಿಲ್ಲ.’’

‘‘ಇದನ್ನು ನಾನು ನಂಬುವುದಿಲ್ಲ’’ ಮೇಬಲ್ ಹೇಳಿದಳು.

‘‘ಇದು ನಾನು ನಿನ್ನ ಮುಂದೆ ಕುಳಿತಿರುವುದಷ್ಟೇ ಸತ್ಯ ಮೇಬಲ್. ಜೇನ್ನೊಣಗಳು ತಮಗೆ ಯಾವಾಗ ಬೇಕೋ ಆಗ ಒಂದು ರಾಣಿಯನ್ನು ತಯಾರು ಮಾಡುತ್ತವೆ.’’

‘‘ಅದು ಹೇಗೆ?’’

‘‘ಅದೊಂದು ರಹಸ್ಯ. ನೀನೇಂತಿಯಾ ಮೇಬಲ್?’’

‘‘ಅದೇ, ನೀನು ಮೊದಲೇ ಹೇಳಿದಂತೆ ರಾಜಪಾಕ!’’

‘‘ನೀನು ಹೇಳಿದ್ದು ಸರಿ. ರಾಜಪಾಕ.’’ ಚಪ್ಪಾಳೆ ತಟ್ಟುತ್ತಾ ಆಲ್ಬರ್ಟ್ ಉತ್ತೇಜಿತನಾದ. ಅವನ ಮುಖ ಕೆಂಪಗಾಗಿ ಹೊಳೆಯುತ್ತಿತ್ತು. ಅವನು ಮುಂದುವರೆಸುತ್ತಾ, ‘‘ಸರಳವಾಗಿ ಹೇಳುವುದಾದರೆ, ಜೇನ್ನೊಣಗಳಿಗೆ ಹೊಸ ರಾಣಿಯ ಅಗತ್ಯವಿದೆ ಎನಿಸಿದಲ್ಲಿ, ಜೇನು ಹುಟ್ಟುಗಳ ಗೂಡಿನಲ್ಲಿ ಆಯಕಟ್ಟಿನ ದೊಡ್ಡದಾದ ಗೂಡೊಂದು ನಿರ್ಮಾಣವಾಗುತ್ತದೆ. ಇದನ್ನು ಜೇನು ರಾಣಿಯ ಅಂತಃಪುರವೆಂದು ಕರೆಯಬಹುದೇನೋ. ಇದರಲ್ಲಿ ಮೊಟ್ಟೆಗಳನ್ನಿಡುವ ರಾಣಿ ಹುಳ, ಉಳಿದ ಸಾಮಾನ್ಯ ಕೆಲಸಗಾರ ಜೇನ್ನೊಣಗಳ ಗೂಡುಗಳಲ್ಲೂ ಮೊಟ್ಟೆಗಳನ್ನಿಡುತ್ತದೆ. ಮೊಟ್ಟೆಗಳು ಒಡೆದು ಹುಳುಗಳು ಹೊರಬರುತ್ತವೆ. ಕೆಲಸಗಾರ ಜೇನ್ನೊಣಗಳು ರಾಣಿ ಹುಳವನ್ನಷ್ಟೇ ಅಲ್ಲದೆ ಎಲ್ಲ ಹುಳಗಳಿಗೂ ರಾಜಪಾಕವನ್ನು ತಿನ್ನಿಸುತ್ತವೆ. ಆದರೆ ಇಲ್ಲೊಂದು ವ್ಯತ್ಯಾಸವಿದೆ, ಮೇಬಲ್. ಕೆಲಸಗಾರ ಹುಳುಗಳಿಗೆ ತಮ್ಮ ಬಾಲ್ಯಾವಸ್ಥೆಯ ಕೇವಲ ಮೂರುದಿನಗಳಿಗಷ್ಟೇ ರಾಜಪಾಕ ಲಭಿಸಿದರೆ ಮುಂದೆ ಅವುಗಳ ಪಥ್ಯ ಬದಲಾಗುತ್ತದೆ. ಮೂರು ದಿನಗಳ ನಂತರ ಅವುಗಳ ಆಹಾರ ಇತರೆ ಸಾಮಾನ್ಯ ಜೇನ್ನೊಣಗಳಂತೆ ಕೇವಲ ಜೇನು ತುಪ್ಪ ಮತ್ತು ಪರಾಗವಷ್ಟೇ ಲಭ್ಯವಾಗುತ್ತದೆ. ಮುಂದಿನ ಎರಡು ವಾರಗಳಲ್ಲಿ ಈ ಸಾಮಾನ್ಯ ಹುಳುಗಳು ಜೇನನ್ನು ಅರಸುತ್ತಾ ಹೊರಬೀಳುತ್ತವೆ.

ರಾಣಿಯ ಅಂತಃಪುರದಲ್ಲಿರುವ ಹುಳುಗಳ ವಿಚಾರವೇ ಬೇರೆ... ರಾಣಿಗೆ, ಅದರ ಬಾಲ್ಯಾವಸ್ಥೆಯಲ್ಲಿ ಪ್ರತಿದಿನ ರಾಜಪಾಕವೇ ಪ್ರಮುಖ ಆಹಾರ. ಅದು ರಾಜಪಾಕದಲ್ಲೇ